ಕರ್ನಾಟಕ ಸರಕಾರ

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ವಿಜಯಪುರ**

ದೂರವಾಣಿ ಸಂಖ್ಯೆ :- 08352-250107 ಫ್ಯಾಕ್ಸ್ :- 08352-258038 ಇ-ಮೇಲ್:-dhobijapur@gmail.com

ಸಂಖ್ಯೆ/ಸಿ.ಅಧೀಕ್ಷಕ/ಸಿಆರ್/693/2026-27 ದಿನಾಂಕ:28/07/2026

# ನೇಮಕಾತಿ ಅಧಿಸೂಚನೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವಿಜಯಪುರ ಇವರ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಲ್ಲಿ ಮಂಜೂರಾಗಿ ಖಾಲಿ ಇರುವ ಕೆಳಕಾಣಿಸಿದ ವಿವಿಧ ಹುದ್ದೆಗಳಿಗೆ ಒಂದು ವರ್ಷದ ಅವಧಿಗೆ ಷರತ್ತು ಹಾಗೂ ನಿಬಂಧನೆಗೊಳಪಟ್ಟು, ರೋಷ್ಟರ-ಕಂ-ಮೆರಿಟ್ ಅನುಸರಿಸಿ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅವ್ಹಾನಿಸಲಾಗಿದೆ.

| ಹುದ್ದೆಗಳ ಹೆಸರು | ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಗಳ ಸಂಖ್ಯೆ | ರೋಷ್ಟರ ವಿವರ | | | | | | ವಿದ್ಯಾರ್ಹತೆ |
|---|---|---|---|---|---|---|---|---|
| | | SC-A & B | GM | ST | Cat-I | 2A | 2B | |
| ಶುಶ್ರೂಷಾಧಿಕಾರಿ | 04 (25% Bsc. Nursing) | ಸಾಅ-1 | ಸಾಅ-1, ಮಹಿಳಾ-1 | ಸಾಅ-1 | - | - | - | ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಹತೆಯನ್ನುಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು |
| | 12 (75% Diploma Nursing) | ಸಾಅ-1 A ಮಹಿಳಾ-1 B | ಸಾಅ-1, ಮಹಿಳಾ-2, ಗ್ರಾ,ಅ-2 ಅಂ.ಅ-1 | ಸಾಅ-1 | ಸಾಅ-1 | ಸಾಅ-1 | ಸಾಅ-1 | ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಹತೆಯನ್ನುಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು |
| ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 07 | ಸಾಅ-1, | ಸಾಅ-1, ಮ-1, ಗ್ರಾ,ಅ-1 | ಸಾಅ-1 | ಸಾಅ-1 | ಸಾಅ-1 | - | DMLTC ವಿದ್ಯಾರ್ಹತೆಯನ್ನುಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು |
| ಫಾರ್ಮಸಿ ಅಧಿಕಾರಿ | 03 | ಸಾಅ-1 | ಸಾಅ-1 | ಸಾಅ-1 | - | - | - | ಡಿ ಫಾರ್ಮಾ ವಿದ್ಯಾರ್ಹತೆಯನ್ನುಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು |

**ವಿದ್ಯಾರ್ಹತೆ:**

**ಶುಶ್ರೂಷಾಧಿಕಾರಿಗಳು:** ಬಿ.ಎಸ್ಸಿ/ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಹಾಗೂ ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನಲ್ಲಿ ನೊಂದಣಿಯಾಗಿರಬೇಕು.

**ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ:** DMLTC ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು.

**ಫಾರ್ಮಸಿ ಅಧಿಕಾರಿ:** ಡಿ ಫಾರ್ಮಾ ವಿದ್ಯಾರ್ಹತೆಯನ್ನುಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು. ಹಾಗೂ ಡಿ ಫಾರ್ಮಾ ಅಭ್ಯರ್ಥಿಗಳು ಕರ್ನಾಟಕ ಫಾರ್ಮಸಿ ಕೌನ್ಸಿಲಿಂಗ್ ನಲ್ಲಿ ಕಡ್ಡಾಯವಾಗಿ ನೊಂದಣಿಯಾಗಿರಬೇಕು.

**ಷರತ್ತು ಮತ್ತು ನಿಭಂಧನೆಗಳು:**

1) ಅಭ್ಯರ್ಥಿಯ ವಯಸ್ಸು 45 ವರ್ಷ ಒಳಗಿರತಕ್ಕದ್ದು.
2) ಈ ಗುತ್ತಿಗೆ ನೇಮಕಾತಿಯು ಒಂದು ವರ್ಷದ ಅವಧಿಗೆ ಮಾತ್ರ ಸಿಮಿತವಾಗಿರುತ್ತದೆ.
3) ಗುತ್ತಿಗೆ ಆಧಾರದ ಮೇಲೆ ಆಯ್ಕೆಗೊಂಡ ಸಿಬ್ಬಂದಿಯವರು ಖಾಯಂ ನೇಮಕಾತಿಗಾಗಲೀ ವಿಶ್ರಾಂತಿ ವೇತನಕ್ಕಾಗಲೀ ನಿವೃತ್ತ ಉಪದಾನ, ವೇತನ ಶ್ರೇಣಿ ಅಥವಾ ಇನ್ನಿತರ ಯಾವುದೇ ಭತ್ಯೆಗಳನ್ನು ಪಡೆಯಲು ಹಕ್ಕನ್ನು ಹೊಂದಿರುವುದಿಲ್ಲ. ಮತ್ತು ಅರ್ಹರಿರುವುದಿಲ್ಲ ಹಾಗೂ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.
4) ಆಯ್ಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ, ಅಭ್ಯರ್ಥಿಯು ಬೇಡಿಕೆಯ ಮೇಲೆ ಬೇರೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲೀ/ಪರಸ್ಪರ ವರ್ಗಾವಣೆಗಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.
5) ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗುವಾಗ ಮೂಲ ದಾಖಲೆಗಳನ್ನು ಅಂದರೆ ವಿದ್ಯಾರ್ಹತೆಯ ಅಂಕಪಟ್ಟಿ ಜನ್ಮ ದಿನಾಂಕದ ದಾಖಲೆ ಇತ್ಯಾದಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮುಂದೆ ಹಾಜರುಪಡಿಸತಕ್ಕದ್ದು.
6) ಗುತ್ತಿಗೆ ಆಧಾರದ ಮೇಲೆ ಆಯ್ಕೆಗೊಂಡ ಅಭ್ಯರ್ಥಿಗಳ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣವಿಲ್ಲದೆ ಒಂದು ತಿಂಗಳ ನೋಟಿಸ್ ನೀಡಿ ಕರ್ತವ್ಯದಿಂದ ಬಿಡುಗಡೆಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.
7) ಕಾರ್ಯಕ್ಷಮತೆಯ ಬಗ್ಗೆ ದೂರು ಬಂದಲ್ಲಿ ಒಂದು ವಾರದ ನೋಟೀಸ್ ಕೊಟ್ಟು ಅಭ್ಯರ್ಥಿಗೆ ಸ್ಪಷ್ಟನೆ ನೀಡಲು ಅವಕಾಶ ನೀಡಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗುವದು.
8) ದುರ್ನಡತೆಯಿಂದಾಗಿ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ತುಂಬಿಕೊಡುವ ಷರತ್ತಿಗೆ ಬದ್ಧರಾಗಿರಬೇಕು.
9) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸೇವೆಗಳ ನಿರ್ದೇಶನಾಲಯವು ಕಾಲಕಾಲಕ್ಕೆ ವಹಿಸಿದ ಕರ್ತವ್ಯ ಜವಾಬ್ದಾರಿಗಳನ್ನು ಅವರುಗಳು ತಪ್ಪದೇ ನಿರ್ವಹಿಸತಕ್ಕದ್ದು.

Scanned with OKEN Scanner

10) ಗುತ್ತಿಗೆ ನೌಕರರಿಗೆ ರಜೆ ಸೌಲಭ್ಯ:

• ರಾಷ್ಟ್ರೀಯ ಆರೋಗ್ಯ ಅಭಿಯಾನದ ಸುತ್ತೋಲೆ ದಿನಾಂಕ:10.02.2023 ರಲ್ಲಿ ಉಲ್ಲೇಖಿಸಿರುವಂತೆ ಸಿಬ್ಬಂದಿಗಳ ರಜಾ ಸೌಲಭ್ಯವನ್ನು ಸದರಿ ಗುತ್ತಿಗೆ ಆಧಾರದ ನೇಮಕಾತಿಗೆ ವಿಸ್ತರಿಸಲಾಗಿದೆ. ಆಯ್ಕೆ ಹೊಂದಿದ ಸಿಬ್ಬಂದಿಗಳ ತಾತ್ಕಾಲಿಕ ಸರ್ಕಾರಿ ನೌಕರರಿಗೆ ಸಿಗುವ ರಜೆಗಳನ್ನು ಪಡೆಯಲು ಮಾತ್ರ ಅರ್ಹರಿರುತ್ತಾರೆ. ಅಂದರೆ, ಪ್ರತಿಯೊಂದು ತಿಂಗಳ ಪೂರ್ಣ ಪ್ರಮಾಣದ ಸೇವೆ ಪೂರೈಸಿದರೆ ಒಂದು ದಿನ ಸಾಂದರ್ಭಿಕ ರಜೆ ಗಳಿಕೆಯಾಗುತ್ತದೆ. ಅಂತಹ ರಜೆಯನ್ನು ಬಿಡಿಯಾಗಿ ಅಥವಾ ಒಟ್ಟಾಗಿ ಮೇಲಾಧಿಕಾರಿಗಳ ಅಪ್ಪಣೆಯಂತೆ ಪಡೆಯಬಹುದು. ರಜೆಯನ್ನು ತಮ್ಮ ಹಕ್ಕನ್ನಾಗಿ ಕೇಳಿಪಡೆಯುವಂತಿಲ್ಲ.

• ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿರುವ ಸಿಬ್ಬಂದಿಗಳು ಒಂದು ವರ್ಷದಲ್ಲಿ 10 ದಿನಗಳ ವೈದ್ಯಕೀಯ ಆಧಾರದ ಮೇಲೆ ರಜೆ ಪಡೆಯಲು ಅರ್ಹರಿರುತ್ತಾರೆ.

• ಮಹಿಳಾ ಸಿಬ್ಬಂದಿಗಳು 180 ದಿನಗಳ ವೇತನ ಸಹಿತ ಪ್ರಸೂತಿ ರಜೆ ಪಡೆಯಲು ಅರ್ಹರಿರುತ್ತಾರೆ. (ಜೀವಂತ ಮೊದಲೆರೆಡು ಹೆರಿಗೆಗಳಿಗೆ ಮಾತ್ರ)

• ಪುರುಷ ನೌಕರರು ಪತ್ನಿಗೆ ಹೆರಿಗೆಯಾದ ದಿನಾಂಕದಿಂದ 15 ದಿವಸಗಳ ಪಿತೃತ್ವ ರಜೆಯನ್ನು ಪಡೆಯಲು ಅರ್ಹರಿರುತ್ತಾರೆ.

• ಗರ್ಭಸ್ರಾವ ಅಥವಾ ಗರ್ಭಪಾತದಿಂದ ಗರ್ಭಧಾರಣೆಯು ಪರ್ಯಾವಸಾನಗೊಂಡ ಸಂದರ್ಭದಲ್ಲಿ ಮಾತೃತ್ವ ರಜೆಯು 6 ವಾರಗಳನ್ನು ಮೀರಬಾರದು. ಇಂತಹ ರಜೆಗಾಗಿ ಸಲ್ಲಿಸಿದ ಅರ್ಜಿಯು ನೊಂದಾಯಿತ ವೃತ್ತಿನಿರತ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರದಿಂದ ಸಮರ್ಥಿತವಾಗಿರಬೇಕು.

• ಮಾತೃತ್ವ ರಜೆಯ ಮೇಲೆ ತೆರಳುವ ಸಿಬ್ಬಂದಿಗಳಿಗೆ ರಜೆಯ ನಿಕಟಪೂರ್ವದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಸಮನಾದ ವೇತನವನ್ನು ರಜೆಯ ಅವಧಿಯಲ್ಲಿ ಪಡೆಯಲು ಅರ್ಹರಿರುತ್ತಾರೆ.

• ಎರಡಕ್ಕಿಂದ ಹೆಚ್ಚು ಜೀವಂತ ಮಕ್ಕಳನ್ನು ಹೊಂದಿರುವ ಮಹಿಳಾ ಸಿಬ್ಬಂದಿಗಳಿಗೆ ಈ ಮಾರ್ತತ್ವ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ.

• ಮಾತೃತ್ವ ರಜೆಗಾಗಿ ಸಲ್ಲಿಸುವ ಅರ್ಜಿಯೊಂದಿಗೆ ಸಂಬಂಧಿತ ಮಹಿಳಾ ಸಿಬ್ಬಂದಿಗಳು ಈ ಕುರಿತು ಸ್ವಯಂ-ಘೋಷಣೆಯನ್ನು ಮಾತೃತ್ವ ರಜೆಯನ್ನು ಮಂಜೂರು ಮಾಡುವ ಅಧಿಕಾರಿಗೆ ಸಲ್ಲಿಸತಕ್ಕದ್ದು.

• ಗುತ್ತಿಗೆ ಆಧಾರದ ಮೇಲೆ ನೇಮಕಗೊಮಡ ಮಹಿಳಾ ಸಿಬ್ಬಂದಿಗಳಿಗೆ ಗರಿಷ್ಠ 180 ದಿನಗಳವರೆಗೆ ಮಾತೃತ್ವ ರಜೆಯನ್ನು ಈ ಕೆಳಕಂಡಂತೆ ನಿಯತಗೊಳಿಸತಕ್ಕದ್ದು.

ಶ್ರೀಮತಿ X ಇವರ ಒಪ್ಪಂದದ ಅವಧಿ ದಿನಾಂಕ: 15.07.2021 ರಿಮದ ಪ್ರಾರಂಭವಾಗಿ ದಿನಾಂಕ:14.07.2022 ಕ್ಕೆ ಮುಕ್ತಾಯವಾಗುತ್ತದೆ. ಅವರು ದಿನಾಂಕ:01.05.2022 ರಂದು ಮಾತೃತ್ವ ರಜೆಯ ಮೇಲೆ ತೆರಳಿದ್ದಲ್ಲಿ ಹಾಗೂ ಅವರ ಗುತ್ತಿಗೆ ಅವಧಿಯು ವಿಸ್ತರಿಸಲ್ಪಡದಿದ್ದಲ್ಲಿ ಅವರ ಮಾತೃತ್ವ ರಜೆಯ ಅವಧಿಯನ್ನು ಒಪ್ಪಂದದ ಗರಿಷ್ಠ ಅವಧಿಯವರೆಗೆ ಅಂದರೆ ದಿನಾಂಕ:14.07.2022 ರವರೆಗೆ ಸೀಮಿತಗೊಳಿಸತಕ್ಕದ್ದು.

ಒಂದು ವೇಳೆ ಅವರ ಗುತ್ತಿಗೆ ಅವಧಿಯು ವಿಸ್ತರಿಸಲ್ಪಟ್ಟಲ್ಲಿ ಆಗ ಅವರು ಗರಿಷ್ಠ 180 ದಿನಗಳ ಮಾತೃತ್ವ ರಜೆಯನ್ನು ಪಡೆಯಲು ಅರ್ಹರಿರುತ್ತಾರೆ.

11) ಆಯ್ಕೆ ಹೊಂದಿದ ಗುತ್ತಿಗೆ ನೌಕರರ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಕ್ಕೆ ಇಲಾಖೆಯ ವತಿಯಿಂದ ಖಾಯಂ ನೌಕರರು ಬಂದಲ್ಲಿ ಕರ್ತವ್ಯದಿಂದ ಬಿಡುಗಡೆ ಹೊಂದಲು ತಕರಾರು ಮಾಡುವಂತಿಲ್ಲ ಹಾಗೂ ಈ ಬಗ್ಗೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅಥವಾ ಇನ್ನಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವಂತಿಲ್ಲ.

12) ಆಯ್ಕೆ ಹೊಂದಿದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ಮೊದಲು ಮೇಲಿನ ನಿಬಂಧನೆಗಳನ್ನು ಒಪ್ಪಿಕೊಂಡಿರುವಂತೆ ರೂ. 100.00 (ರೂಪಾಯಿ ನೂರುಗಳ) ಛಾಪಾ ಕಾಗದದ ಮೇಲೆ ಮುಚ್ಚಳಿಕೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಬರೆದು ಕೊಡತಕ್ಕದ್ದು.

13) ಆಯ್ಕೆಗೊಂಡ ಗುತ್ತಿಗೆ ನೌಕರರು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿ ವಾಸಿಸತಕ್ಕದ್ದು.

ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಈ ಕಛೇರಿಯಿಂದ ದಿನಾಂಕ:28-07-2026 ರಿಂದ ಉಚಿತವಾಗಿ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿ ಹಾಗೂ ತಮ್ಮ ಎಲ್ಲ ಮೂಲ ಹಾಗೂ ನಕಲು ಪ್ರತಿ ಶೈಕ್ಷಣಿಕ ದಾಖಲಾತಿಗಳು, ಜಾತಿ ಪ್ರಮಾಣ ಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ಹಾಗೂ ಇತರೆ ಸಂಬಂಧಪಟ್ಟ ದಾಖಲೆಗಳೊಂದಿಗೆ **ದಿನಾಂಕ:07-08-2026ರಂದು ಬೆಳಿಗ್ಗೆ:10:00 ಗಂಟೆಯಿಂದ ಸಂಜೆ: 5:30ರ ವರೆಗೆ ಈ ಕಛೇರಿಯಲ್ಲಿ ನಡೆಯುವ ನೇರ ಸಂದರ್ಶನಕ್ಕೆ ಖುದ್ದಾಗಿ ಹಾಜರಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವದಿಲ್ಲ.**

ಸದಸ್ಯ ಕಾರ್ಯದರ್ಶಿಗಳು
ಆಯ್ಕೆ ಸಮಿತಿ ಹಾಗೂ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು ವಿಜಯಪುರ

Scanned with OKEN Scanner